# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 627 (786)
ಸದಸ್ಯರ ಹೆಸರು : ಶ್ರೀ ಬಿ.ಎಂ.ಫಾರೂಖ್
(ವಿಧಾನಸಭೆಯಿಂದ ಚುನಾಯಿತರಾದವರು).
ಉತ್ತರಿಸಬೇಕಾದ ದಿನಾಂಕ : 22-02-2023.
ಉತ್ತರಿಸುವ ಸಚಿವರು : ಮಾನ್ಯ ಮುಜರಾಯಿ ಹಾಗೂ ಹಜ್ ಮತ್ತು ವಕ್ಫ್ ಸಚಿವರು.

| ಕ್ರ.ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ. | ಹಲವು ವರ್ಷಗಳಿಂದ ನನೆಗುದಿಗೆ ಬಿದ್ದಿರುವ ಮಂಗಳೂರು ಹಜ್ ಭವನದ ನಿರ್ಮಾಣ ಕಾರ್ಯ ಇದುವರೆಗೂ ಪ್ರಾರಂಭವಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ. | ಹಾಗಿದ್ದಲ್ಲಿ, ಹಜ್ ಭವನ ನಿರ್ಮಾಣ ಮಾಡಲು ಕ್ರಮಗಳನ್ನು ಕೈಗೊಳ್ಳದೇ ಇರಲು ಕಾರಣಗಳೇನು; | ಮಂಗಳೂರಿನಲ್ಲಿ ಹಜ್ ಭವನ ನಿರ್ಮಾಣಕ್ಕಾಗಿ ಮಂಗಳೂರು ತಾಲ್ಲೂಕು, ಕೆಂಜಾರು ಗ್ರಾಮದ ಸ.ನಂ. 99-2ಪಿ1 ರಲ್ಲಿ 1.92 ಎಕರೆ ಜಮೀನನ್ನು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಹೆಸರಿನಲ್ಲಿ ಸ್ವಾಧೀನಪಡಿಸಿಕೊಂಡು, ಹಜ್ ಭವನದ ನಿರ್ಮಾಣಕ್ಕಾಗಿ ಕಾಯ್ದಿರಿಸಲಾಗಿರುತ್ತದೆ. ಆದರೆ ಸದರಿ ಜಮೀನಿನ ಪ್ರಕರಣವು ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣ, ಬೆಂಗಳೂರು ಇಲ್ಲಿ ರಿಟ್ ಪಿಟಿಷನ್ ಸಂಖ್ಯೆ APL 746 / 2016 (ನ್ಯಾಯ) 2 (ಸಿ.ಹೆಚ್)/ HG - 31-03-2017 ರಂದು ದಾಖಲಾಗಿಸಿದ್ದು, ಕರ್ನಾಟಕ ಮೇಲ್ಮನವಿ ನ್ಯಾಯಾಧೀಕರಣವು ಮಂಗಳೂರು ಸಹಾಯಕ ಆಯುಕ್ತರ ದಿನಾಂಕ:12-04-2016ರ ಆದೇಶವನ್ನು ನಿಗದಿಪಡಿಸುವ ಮೂಲಕ ಮೇಲ್ಮನವಿಯನ್ನು ಅನುಮತಿಸಿದ್ದು, ಎರಡೂ ಪಕ್ಷಗಳನ್ನು ಕೇಳುವ ಮೂಲಕ ಕಾನೂನಿನ ಪ್ರಕಾರ ಪ್ರಕರಣವನ್ನು ಹೊಸದಾಗಿ ನಿರ್ಧರಿಸಲು ದಕ್ಷಿಣಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ.<br><br>ಮತ್ತೊಂದು ಪ್ರಸ್ತಾವನೆಯಲ್ಲಿ ಮಂಗಳೂರು ತಾಲ್ಲೂಕು, ಮಳವೂರು ಗ್ರಾಮದ ಸ.ನಂ. 8/45 ರಲ್ಲಿ 2.16 ಎಕರೆ ಜಮೀನನ್ನು ಮಂಗಳೂರಿನಲ್ಲಿ ನಿರ್ಮಾಣವಾಗಲಿರುವ ಹಜ್ ಭವನಕ್ಕಾಗಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಮಂಗಳೂರು ಇವರ ಹೆಸರಿಗೆ ದಿನಾಂಕ:16.09.2019 ರಂದು ಕಾಯ್ದಿರಿಸಲಾಗಿರುತ್ತದೆ. ಆದರೆ ಸದರಿ ಜಮೀನಿನ ಹಂಚಿಕೆಯ ಪ್ರಕರಣವು ಬೆಂಗಳೂರಿನ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿದ್ದು, ವಿಚಾರಣೆ ಹಂತದಲ್ಲಿ ಬಾಕಿ ಇರುತ್ತದೆ. |

| | | |
|---|---|---|
| | | 3ನೇ ಪ್ರಸ್ತಾವನೆಯಲ್ಲಿ ಸರ್ಕಾರವು ಮಂಗಳೂರು ತಾಲ್ಲೂಕು. ಅಡ್ಯಾರು ಗ್ರಾಮದ ಸರ್ವೆ ಸಂಖ್ಯೆ 3-1ಎ ರಲ್ಲಿ 0.69 ಸೆಂಟ್ಸ್ ಜಾಗವನ್ನು ಹಜ್ ಭವನದ ನಿರ್ಮಾಣಕ್ಕಾಗಿ ಸ್ವಾಧೀನ ಪಡಿಸಿಕೊಂಡಿದ್ದು. ದಿನಾಂಕ:13-07-2020 ರ ಸರ್ಕಾರದ ಆದೇಶ ಸಂಖ್ಯೆ ಎಂಡಬ್ಲೂಡಿ 10 ಡಬ್ಲೂಹೆಚ್‌ಜೆ 2019 ರಂದು ಸದರಿ ಜಾಗದಲ್ಲಿ ಹಜ್ ಭವನ ನಿರ್ಮಾಣ ಸಂಬಂಧಿತ ಯೋಜನಾ ಅಭಿವೃದ್ಧಿ ಸಮಿತಿ (P D C) ಯನ್ನು ರಚಿಸಿರುತ್ತದೆ. ಈ ಜಮೀನಿನ್ನು ಹಜ್ ಭವನದ ನಿರ್ಮಾಣಕ್ಕಾಗಿ ಹಂಚಿಕೆಯಾದ ನಂತರ, ಈ ಹಂಚಿಕೆಯ ವಿರುದ್ಧ ಹಲವಾರು ದೂರುಗಳು ಸ್ವೀಕೃತವಾಗಿದ್ದು ಹಾಗೂ ಸದರಿ ಸ್ಥಳವು ವಿಮಾನ ನಿಲ್ದಾಣದಿಂದ ಸುಮಾರು 10 ಕಿ.ಮೀ. ದೂರದಲ್ಲಿದ್ದು. ವಿಮಾನ ಪ್ರಯಾಣದ ಸಮಯದಲ್ಲಿ ಹೆಚ್ಚಿನ ಟ್ರಾಫಿಕ್ ಉಂಟಾಗುವುದರಿಂದ ಯಾತ್ರಾರ್ಥಿಗಳಿಗೆ ಅನಾನುಕೂಲವಾಗುವುದು ಎಂದು ಪರಿಗಣಿಸಿ ದಿನಾಂಕ:29-10-2020 ರಂದು ಸರ್ಕಾರವು ಹಜ್ ಭವನ ನಿರ್ಮಾಣಕ್ಕಾಗಿ ರಚಿಸಲಾಗಿದ್ದ ಯೋಜನಾ ಅಭಿವೃದ್ಧಿ ಸಮಿತಿ (P D C) ಯನ್ನು ರದ್ದುಪಡಿಸಿರುತ್ತದೆ.<br><br>ಮಂಗಳೂರು ವಿಮಾನ ನಿಲ್ದಾಣಕ್ಕೆ ಹತ್ತಿರವಿರುವ ಮೇಲಿನ ಮೊದಲನೇ ಪ್ರಸ್ತಾವನೆಯಂತೆ ಮಂಗಳೂರು ತಾಲ್ಲೂಕು ಕೆಂಜಾರು ಗ್ರಾಮದ ಸರ್ವೆ ಸಂಖ್ಯೆ 99/2ಎ-1 ರಲ್ಲಿ ಹಜ್ ಭವನ ನಿರ್ಮಾಣ ಮಾಡುವ ಪ್ರಸ್ತಾವನೆ ಪರಿಶೀಲನೆಯಲ್ಲಿರುತ್ತದೆ. |
| ಇ. | ಹಜ್ ಭವನಕ್ಕೆ ಮಂಜೂರಾದ ಜಾಗವು ಇದುವರೆಗೆ ಹಸ್ತಾಂತರವಾಗದೇ ಇರುವುದಕ್ಕೆ ಕಾರಣಗಳೇನು; | ಹಜ್ ಭವನಕ್ಕೆ ಮಂಜೂರಾದ ಜಾಗವು ಇದುವರೆಗೆ ಹಸ್ತಾಂತರವಾಗದೇ ಇರುವುದಕ್ಕೆ ಕಾರಣಗಳನ್ನು ಪ್ರಶ್ನೆ ಸಂಖ್ಯೆ – **"ಆ"** ನಲ್ಲಿ ವಿವರಿಸಲಾಗಿದೆ. |
| ಈ. | ಪರ್ಯಾಯ ಸ್ಥಳ ಯೋಜನೆಗಳೇನಾದರೂ ಇದ್ದಲ್ಲಿ ಯಾವ ಕಾಲಮಿತಿಯಲ್ಲಿ ವ್ಯವಸ್ಥಿತ ಹಜ್ ಭವನ ನಿರ್ಮಾಣ ಕಾರ್ಯಗತಗೊಳಿಸಲಾಗುವುದು; | ವ್ಯವಸ್ಥಿತ ಹಜ್ ಭವನ ನಿರ್ಮಾಣ ಮಾಡಲು ಪರ್ಯಾಯ ಸ್ಥಳದ ಕುರಿತು ಯೋಜನೆ ಸರ್ಕಾರದ ಪರಿಶೀಲನೆಯಲ್ಲಿದೆ. |
| ಉ | ಕರಾವಳಿ ಮತ್ತು ಮಲೆನಾಡು ಭಾಗದ ಹಜ್ ಯಾತ್ರಿಗಳಿಗೆ ಒಂದು ಉತ್ತಮ ಹಜ್ ಭವನದ ಸೌಲಭ್ಯಗಳನ್ನು ಮಂಗಳೂರಿನಲ್ಲಿ ಪಡೆಯಲು ಯಾವಾಗ ಸರ್ಕಾರ ಕ್ರಮ ವಹಿಸುವುದು? | ಮಂಗಳೂರಿನಲ್ಲಿ ಉತ್ತಮ ಹಜ್ ಭವನದ ಸೌಲಭ್ಯಗಳನ್ನು ಪಡೆಯಲು ಶೀಘ್ರದಲ್ಲಿಯೇ ಕ್ರಮ ತೆಗೆದುಕೊಳ್ಳಲಾಗುವುದು. |

ಸಂಖ್ಯೆ: **MWD 31 LMQ 2023**

(ಶಶಿಕಲಾ ಅ.ಜೊಲ್ಲೆ)
ಮುಜರಾಯಿ ಹಜ್ ಮತ್ತು
ವಕ್ಫ್ ಸಚಿವರು